

# ಕೊಹ್ಲಿ ಆಟಕ್ಕೆ ಮುಪ್ಪಡರಿತೆ?

**ಕ್ರಿಕೆಟ್ ಅಂಗಳದಲ್ಲಿ ರನ್‌ಗಳನ್ನು ಹೆಕ್ಕುವಲ್ಲಿ ವಿರಾಟ್ ಕೊಹ್ಲಿ ಅವರು ಸತತವಾಗಿ ವಿಫಲರಾಗುತ್ತಿದ್ದಾರೆ. ಆಟಗಾರನ ಪ್ರದರ್ಶನದ ಮೇಲೆ ವಯಸ್ಸು ಪರಿಣಾಮ ಬೀರುತ್ತದೆ ಎನ್ನುವುದು ನಿಜ. ಆದರೆ, ಕೆಲವು ಆಟಗಾರರ ವಯಸ್ಸಿನ ಮೇಲೆಯೇ ಸವಾರಿ ಮಾಡಿರುವುದೂ ಇದೆ.**

**■ ವಿಶಾಖ ಎನ್.**

ನಿಕ್ ಕಿರ್ಗಿಯೋಸ್ 30 ಏಸ್‌ಗಳನ್ನು ಹಾಕಿದರು. ಎದುರಾಳಿ ನೊವಾಕ್ ಜೊಕೊವಿಚ್‌ಗೆ ಹಾಕಲು ಸಾಧ್ಯವಾದದ್ದು 15 ಏಸ್‌ಗಳನ್ನಷ್ಟೆ. ಇಬ್ಬರೂ ತಲಾ ಏಳು ಡಬಲ್ ಫಾಲ್ಟ್‌ಗಳನ್ನು ಮಾಡಿದರು. ಮೊದಲ ಸರ್ವ್ ಅನ್ನು ಯಶಸ್ವಿಯಾಗಿ ಪ್ರಯೋಗಿಸಿದ ಪ್ರತಿಶತ ಪ್ರಮಾಣದಲ್ಲಿಯೂ ಕಿರ್ಗಿಯೋಸ್ ಮುಂದು (ಶೇ. 74. ಜೊಕೊವಿಚ್ ಶೇ. 63). ಆದರೆ ಮೊದಲ ಹಾಗೂ ಎರಡನೇ ಸರ್ವ್‌ಗಳಲ್ಲಿ ಗೇಮ್ ಗೆಲುವು ಸಾಧಿಸಿದ ಶೇಕಡಾವಾರು ಪ್ರಮಾಣದಲ್ಲಿ ಜೊಕೊವಿಚ್ ಮುಂದು (ಕ್ರಮವಾಗಿ ಶೇ. 83 ಹಾಗೂ ಶೇ. 73). ವಿಂಬಲ್ಡನ್ ಫೈನಲ್‌ನಲ್ಲಿ ಇಂತಹುದೊಂದು ಬೆರಗನ್ನು ಈ ವರ್ಷ ನಾವೆಲ್ಲ ಕಂಡೆವು. 21 ಗ್ರ್ಯಾಂಡ್ ಸ್ಲ್ಯಾಮ್ ಗೆಲುವುಗಳಲ್ಲಿ ಜೊಕೊವಿಚ್ ಹೆಜ್ಜೆಗುರುತು ಆಸಕ್ತಿಕರವಾಗಿದೆ. ಅದರಲ್ಲೂ ವಿಂಬಲ್ಡನ್‌ನಲ್ಲಂತೂ ಅವರು 7 ಸಲ ಚಾಂಪಿಯನ್ ಆಗಿದ್ದಾರೆ. 2018, 2019, 2021 ಹಾಗೂ ಈ ವರ್ಷ ಅವರು ಗೆದ್ದ ಪರಿಯನ್ನು ನೋಡಿದರೆ ವಯಸ್ಸಾದಷ್ಟೂ ಅವರ ಆಟ ಮಾಗಿದೆಯೇನೊ ಎನಿಸುತ್ತದೆ. ಹುಲ್ಲಿನ ಅಂಕಣದಲ್ಲಿ ಅವರು 28 ಪಂದ್ಯಗಳನ್ನು ಸತತವಾಗಿ ಗೆದ್ದಿದ್ದಾರೆ. ರೋಜರ್ ಫೆಡರರ್ ಎಂಟು ಸಲ ವಿಂಬಲ್ಡನ್ ಚಾಂಪಿಯನ್ ಆಗಿದ್ದಾರೆ. ಅವರನ್ನು ಹೊರತುಪಡಿಸಿದರೆ 35 ದಾಟಿದ ಬೇರೆ ಯಾವ ಆಟಗಾರನೂ ಇಲ್ಲಿ ಚಾಂಪಿಯನ್ ಆಗಿರಲಿಲ್ಲ. ಅಂತಹ ಫೆಡರರ್ ವಿರುದ್ಧವೇ ಫೈನಲ್‌ನಲ್ಲಿ ಗೆದ್ದು ಅವರ ವಯಸ್ಸನ್ನು ಪ್ರಶ್ನಿಸುವಂತೆ ಜೊಕೊವಿಚ್ ಕೆಲವು ವರ್ಷಗಳ ಹಿಂದೆಯಷ್ಟೆ ಆಡಿದ್ದರು. ಈಗ ಜೊಕೊವಿಚ್ ತಮ್ಮ ವಯಸ್ಸನ್ನು ಕೆಣಕುವಂತೆ ಆಡುವ ಯುವ ಕಣ್ಣುಗಳಿಗೂ ಸಂಯಮದಾಟದ ಪ್ರಾತ್ಯಕ್ಷಿಕೆ ನೀಡುತ್ತಿದ್ದಾರೆ.

ಆಸ್ಟ್ರೇಲಿಯಾದ ಕಿರ್ಗಿಯೋಸ್‌ಗೆ ಈಗ 27ರ ಪ್ರಾಯ. ಸರ್ಬಿಯಾದ ಜೊಕೊವಿಚ್‌ಗೆ 35 ತುಂಬಿದೆ. ಹಾಗೆ ನೋಡಿದರೆ, ಭಾರತದ ಕ್ರಿಕೆಟಿಗ ವಿರಾಟ್ ಕೊಹ್ಲಿ ಈ ಜೊಕೊವಿಚ್‌ಗಿಂತ ಎರಡು ವರ್ಷ ಕಿರಿಯರು. ಎರಡೂವರೆ ವರ್ಷಗಳಿಂದ ಅವರು ಬ್ಯಾಟಿಂಗ್ ಫಾರ್ಮ್ ಕಂಡುಕೊಳ್ಳಲು ತಡಕಾಡುತ್ತಿದ್ದಾರೆ. ಆಟದ ಕೌಶಲ ಮಾಗಿದಷ್ಟೂ ಎದುರಾಳಿಗೆ ಯಾಕೆ ತಲೆಬಿಸಿ ಎನ್ನುವುದಕ್ಕೆ ಹಲವು ಉದಾಹರಣೆಗಳು ನಮ್ಮ ಮುಂದಿವೆ. ಆದರೆ, ಈಗ ಟೆಸ್ಟ್, ಏಕದಿನ ಕ್ರಿಕೆಟ್, ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳಷ್ಟೆ ಅಲ್ಲದೆ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನ ಗ್ಲ್ಯಾಮರ್ ಕೂಡ ಆಟಗಾರರ ಮೀನಖಂಡಗಳನ್ನು ಕೆಣಕುತ್ತಿವೆ. ಎಲ್ಲ ಮಾದರಿಗಳಲ್ಲೂ ಆಡಿ, ದೇಹ–ಮನ ದಣಿದು, ಸಾಮರ್ಥ್ಯವನ್ನು ಕಾಯ್ದುಕೊಳ್ಳುವುದು ಸುಲಭವೇನಲ್ಲ.

ಅಮೆರಿಕದ ಸೆರೆನಾ ವಿಲಿಯಮ್ಸ್ ಹೆರಿಗೆ ಸಮಯದಲ್ಲಿ ಆಗಿದ್ದ ಸಂಕೀರ್ಣ ಶಸ್ತ್ರಚಿಕಿತ್ಸೆಯ ನಂತರವೂ ರ್‍ಯಾಕೆಟ್ ಹಿಡಿದು ಟೆನಿಸ್ ಆಡಲು ಮುಂದಾದರು. ಆಗ ಅವರಿಗೆ 36 ವರ್ಷ ವಯಸ್ಸಾಗಿತ್ತು. ಆದರೂ ಕೆಲವು ತರುಣಿಯರ ಬೆವರಿಳಿಸುವಲ್ಲಿ ಯಶಸ್ಸು ಕಂಡಿದ್ದರು. ಕೊಹ್ಲಿಗೆ ಮಾತ್ರ ತಮ್ಮ ವಿರಾಟ್ ರೂಪ ತೋರಲು ಆಗುತ್ತಲೇ ಇಲ್ಲ. ಅವರಿಗಿಂತಲೂ ಎರಡು ವರ್ಷ ಕಿರಿಯವ, ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ಕೂಡ ಏಕದಿನ ಕ್ರಿಕೆಟ್‌ಗೆ ಮೊನ್ನೆ ವಿದಾಯ ಹೇಳಿಬಿಟ್ಟರು. ಟೆಸ್ಟ್ ಕ್ರಿಕೆಟ್‌ನ ನಾಯಕನಾಗಬೇಕೆಂದರೆ ಈ ಉತ್ತಡದ ನೊಗವನ್ನು ಕೆಳಗಿಳಿಸದೆ ವಿಧಿಯಿಲ್ಲ ಎಂಬರ್ಥದ ಅವರ ಹೇಳಿಕೆಯ ಸುತ್ತ ಅನೇಕ ಹಳಬರು ಚರ್ಚೆ ಕೂಡ ನಡೆಸಿದರು. ಆಟಗಾರರ ಮೇಲೆ ಹಲವು ಮಾದರಿಯ ಕ್ರಿಕೆಟ್ ಹೇರುತ್ತಿರುವ ಒತ್ತಡ ಎಂಥದೆನ್ನುವುದಕ್ಕೆ ಸ್ಟೋಕ್ಸ್ ನಿವೃತ್ತಿ ಮುನ್ನುಡಿಯಂತೆ ಕಾಣುತ್ತಿದೆ ಎಂಬ ಶೀರ್ಷಿಕೆಯ ಬರಹಗಳೂ ಪ್ರಕಟವಾದವು. ಹಿಂದಿನ ವಿಶ್ವಕಪ್ ಫೈನಲ್‌ನಲ್ಲಿ 84 ರನ್ ಗಳಿಸಿ ತಮ್ಮ ತಂಡದ